ಹನ್ನೆರಡು ವರ್ಷ ಕಳೆದು ಮತ್ತೆ ಅಮ್ಮ ಗರ್ಭಿಣಿಯಾದಳು. ' ಈ ಬಾರಿ ಗಂಡು ಮಗು ಆಗದೇ ಇದ್ರೆ, ಅದು ಬದುಕಿ ಉಳೀದೇ ಇದ್ರೆ, ನಾನೂ ಖಂಡಿತ ಬದುಕಲ್ಲ' ಎಂದು ಅವಳು ಊರಲ್ಲೆಲ್ಲ ಸಾರಿಕೊಂಡು ಬಂದಿದ್ದಳಂತೆ. ಅಷ್ಟು ಬೇಜಾರಾಗಿತ್ತು ಅವಳಿಗೆ.

ಹೆರಿಗೆ ಮಾಡಿಸಲಿಕ್ಕೆ ಹತ್ತಿರದ ಪಟ್ಟಣದಿಂದ ಒಬ್ಬ ಸೂಲಗಿತ್ತಿ ಬಂದಳು. ರಾತ್ರಿ ಹೆರಿಗೆಯಾಯಿತು. ನಮ್ಮಮ್ಮ ದಣಿವಿಗೆ ಪ್ರಜ್ಞೆ ತಪ್ಪಿದ್ದಳು. ಗಂಡು ಮಗು ಹುಟ್ಟಿದ ಹತ್ತು ನಿಮಿಷಕ್ಕೆ ಉಸಿರೆಳೆದು ಸತ್ತು ಹೋಯಿತು. ಸೂಲಗಿತ್ತಿ ಈ ವಿಷಯ ನಮ್ಮಪ್ಪನಿಗೆ ತಿಳಿಸಿದಳು. ಅವನಿಗೆ ದಿಕ್ಕೇ ತೋಚಲಿಲ್ಲ. ತಕ್ಷಣಕ್ಕೆ ಅವನಿಗೆ ತನ್ನ ಹೆಂಡತಿಯನ್ನಾದರೂ ಉಳಿಸಿಕೊಳ್ಳಬೇಕಿತ್ತು. ಯೋಚಿಸಿದ. ಅವನಿಗಿದ್ದುದು ಒಂದೇ ದಾರಿ. ಮಗು ಸತ್ತ ವಿಷಯ ಯಾರಿಗೂ ತಿಳಿಸಬೇಡವೆಂದು ಸೂಲಗಿತ್ತಿಗೆ ಹೇಳಿ, ಸತ್ತ ಮಗುವನ್ನು ಗುಟ್ಟಾಗಿ ಹೊಲೆಗೇರಿಗೆ ಒಯ್ದ. ಅಲ್ಲಿ ಇವನ ನಲ್ಲೆ ಹೊಲತಿಗೆ ಹಿಂದಿನ ದಿನ ಗಂಡು ಮಗುವಾಗಿತ್ತು. ಎಷ್ಟಾದರೂ ಅದೂ ಸಹ ಇವನ ಮಗುವೇ ತಾನೆ? ಜೊತೆಗೆ ಅವಳಿಗೆ ಈಗಾಗಲೇ ಎರಡು ಮಕ್ಕಳಿದ್ದವು. ಸತ್ತ ಮಗೂನ ಅವಳಿಗೆ ಕೊಟ್ಟು, ಅವಳ ಮಗೂನ ತಂದು ತನ್ನ ಹೆಂಡತಿಯ ಪಕ್ಕ ಮಲಗಿಸಿ ಬಿಟ್ಟ. ಮಗು ಯಾರದೆಂದು ಸೂಲಗಿತ್ತಿಗೂ ಗೊತ್ತಾಗಲಿಲ್ಲ. ದೊಡ್ಡ ರೆಡ್ಡಿಯ ಭಯ. ಅವಳೂ ಸಹ ಈ ಗುಟ್ಟನ್ನು ಯಾರಿಗೂ ಬಿಟ್ಟು ಕೊಡಲಿಲ್ಲ. ಹೀಗಿದೆ ನೋಡಿ, ಸಾರ್, ನನ್ನ 'ಜನ್ಮ ರಹಸ್ಯ' ಎಂದು ಚಂದ್ರ ಒಂದು ರೀತಿಯ ವಿಷಾದದಿಂದ ನಸುನಕ್ಕು ಸಿಗರೇಟ್ ಹಚ್ಚಿದ.

ನಾನೆಂದೆ, 'ಒಳ್ಳೇ ಸಿನಿಮಾ ಕಥೆ ಇದ್ದ ಹಾಗಿದೆ. ನನಗಂತೂ ನಂಬಲಿಕ್ಕಾಗ್ತಿಲ್ಲ'. ಚಂದ್ರ ಅಂದ, 'ನನಗೂ ಹಾಗೇ ಅನ್ನಿಸ್ತು, ಸಾರ್, ಆದರೆ ಇಂಥ ವಿಷಯದಲ್ಲಿ ಸುಳ್ಳು ಹೇಳುವ ಧೈರ್ಯವಾಗಲೀ, ಅವಶ್ಯಕತೆಯಾಗಲೀ ಆ ಹೊಲೆಯರಿಗಿಲ್ಲ. ಅಂದು ಕತ್ತಲಿದ್ದುದರಿಂದ ಆ ಮುದುಕೀನ ನಾನು ಸರಿಯಾಗಿ ನೋಡಲಿಕ್ಕಾಗಲಿಲ್ಲ. ಮಾರನೇ ದಿನ ನಮ್ಮ ಹೊಲದಲ್ಲಿ ನೋಡಿದೆ. ನೋಡಿದ ಕೂಡಲೇ ಅವಳು ನಿಜವಾಗಿಯೂ ನನ್ನ ಹೆತ್ತವಳೇ ಎಂಬ ನಂಬಿಕೆ ನನಗೆ ಬಂದು ಬಿಡ್ತು. ಅವಳ ಮುಖದಲ್ಲಿ ನನ್ನ ಹೋಲಿಕೆ ಇದ್ದದ್ದು ಮಾತ್ರ ಕಾರಣವಲ್ಲ. ಅವಳ ನೋಟದಲ್ಲಿ ಅಡಗಿದ್ದ ವಾತ್ಸಲ್ಯ, ಅಂತಃಕರಣ ನನ್ನಲ್ಲಿ ನಂಬಿಕೆ ಹುಟ್ಟಿಸಿದವು. ಆದರೆ ಒಂದು ವಿಷಯ ಮಾತ್ರ ನನಗಿನ್ನೂ ನಿಗೂಢವಾಗಿಯೇ ಉಳಿದುಬಿಟ್ಟಿದೆ. ನನ್ನ ತಂದೆ ಹಾಗೆ ಮಾಡಿದ್ದಕ್ಕೆ ಕಾರಣ ಆ ಕ್ಷಣದ ಹಠಾತ್ ನಿರ್ಧಾರ ಮಾತ್ರವೋ ಅಥವಾ ಆ ಹೊಲತಿಯನ್ನು ಅವನು ತನ್ನ ಹೆಂಡತಿಯಂತೆಯೇ ಪ್ರೀತಿಸುತ್ತಿದ್ದನೋ? ಯಾಕೆಂದರೆ ತಾನು ಬದುಕಿರುವವರೆಗೂ ಅವನು ನನ್ನನ್ನು ತನ್ನ ಸ್ವಂತ ಮಗನಂತೆಯೇ ಪ್ರೀತಿಸಿ ಬೆಳೆಸಿದ. ಎಂದೂ ಸಹ ನನ್ನ ಬಗ್ಗೆ ಅಸಹ್ಯ, ಜಿಗುಪ್ಸೆ ತೋರಲಿಲ್ಲ.

ನನ್ನ ಹುಟ್ಟಿನ ಗುಟ್ಟು ತಿಳಿದ ಆ ರಾತ್ರಿಯಿಂದ ನನ್ನಲ್ಲಿ ಎಂಥ ತಲ್ಲಣ, ತಳಮಳ ಶುರುವಾಗಿದೆ ಅನ್ನೋದು ನೀವು ಅರ್ಥ ಮಾಡಿಕೊಳ್ಳಬಲ್ಲಿರಿ. ನನ್ನ ಹುಟ್ಟು, ಜಾತಿ, ಅಂತಸ್ತು, ಐಶ್ವರ್ಯ ಇವೆಲ್ಲ ಎಂಥ ಸುಳ್ಳಿನ ಮೇಲೆ ನಿಂತಿವೆ ಅನ್ನೋದು ಗೊತ್ತಾಗಿ, ಒಂದು ರೀತಿಯ ಖಾಲಿತನ, ವಿಷಾದ ನನ್ನನ್ನು ಆವರಿಸಿಬಿಟ್ಟಿದೆ. ಈಗ ನನ್ನನ್ನು ನಾನು ಮತ್ತೆ ರೂಪಿಸಿಕೊಳ್ಳಬೇಕಾಗಿದೆ. ಸ್ಥಾಪಿಸಿಕೊಳ್ಳಬೇಕಾಗಿದೆ. ನನ್ನ ಭವಿಷ್ಯದ ದಾರಿ ನಿರ್ಧರಿಸಿಕೊಳ್ಳಬೇಕಾಗಿದೆ. ಈಗ ನಿಮ್ಮ ಸಲಹೆ, ಮಾರ್ಗದರ್ಶನ, ನೈತಿಕ ಬೆಂಬಲ ನನಗೆ ಬೇಕೇ ಬೇಕು' ಎಂದ.

ನಾನೆಂದೆ. 'ಈಗ ನಿನ್ನ ಮುಂದೆ ಎರಡು ಆಯ್ಕೆಗಳಿವೆ: ಒಂದು, ನಿಜವನ್ನು ಧೈರ್ಯವಾಗಿ ಒಪ್ಪಿಕೊಂಡು, ಅದರ ಏನೆಲ್ಲ ಪರಿಣಾಮಗಳಿಗೆ ನಿನ್ನನ್ನು ಒಡ್ಡಿಕೊಳ್ಳುವುದು. ಎರಡು, ನಿಜವನ್ನು